೩. ನಿವೇಶನಗಳ ಪೂರ್ಣ ಹಣವನ್ನು ಎರಡನೇ ಹಂಚಿಕೆದಾರರಿಂದ ಪಾವತಿ ಮಾಡಿಸಿಕೊಂಡಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಈ ಎರಡನೇ ಮಂಜೂರುದಾರರಿಗೆ ನಿವೇಶನಗಳ ಸ್ವಾಧೀನವನ್ನು ಕೊಡದಿರುವುದು ನಿಜವೇ? ಹಾಗಿದ್ದಲ್ಲಿ ಯಾವಾಗ ಸ್ವಾಧೀನಕ್ಕೆ ನೀಡಲಾಗುವುದು.

೪. ಉಚಿತ ನಿವೇಶನಗಳನ್ನು ಪಡೆದ ಮೊದಲ ೨೫ ಬಡ ಕುಟುಂಬಗಳಿಗೆ ಬದಲಿ ನಿವೇಶನಗಳನ್ನು ಕೊಡುವಂತೆ ಕೇಳಿರುವ ಬಡವರ ಸೇವಾ ಸಮಿತಿಯವರ ಅರ್ಜಿಗಳು ಪ್ರಾಧಿಕಾರಕ್ಕೆ ತಲುಪಿದೆಯೇ ?

೫. ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ಮತ್ತು ನಿವಾಸಿಗಳಿಗೆ ಬದಲಿ ನಿವೇಶನಗಳನ್ನು ಸಮಿತಿಯವರು ಕೇಳಿರುವ ಕೋರಮಂಗಲ ೮ನೇ ಬ್ಲಾಕಿನಲ್ಲಿ ರಿಯಾಯಿತಿ ದರವಾದ ಅರ್ಧ ಬೆಲೆಗೆ ಈ ೨೫ ಕೊಳಚೆ ನಿವಾಸಿಗಳಿಗೆ ಬದಲಿ ನಿವೇಶನಗಳನ್ನು ಯಾವಾಗ ನೀಡಲಾಗಿದೆ, ಹಾಗಿಲ್ಲದಿದ್ದಲ್ಲಿ ಯಾವಾಗ ಕೊಡಲಾಗುವುದು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).—

೧. ನಿಜ

೨. ಕೊಟ್ಟಿಲ್ಲ

೩. ಎರಡನೇ ಹಂಚಿಕೆದಾರರಿಗೆ ಹಕ್ಕು ಪತ್ರ ಕೊಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

೪. ತಲುಪಿದೆ

೫. ಕೋರಮಂಗಲ ೮ನೇ ಬ್ಲಾಕಿನ ಬಡಾವಣೆಯಲ್ಲಿ ಖಾಲಿ ನಿವೇಶನಗಳು ಲಭ್ಯವಿಲ್ಲದಿರುವುದರಿಂದ ಬನಶಂಕರಿ ೩ನೇ ಹಂತದಲ್ಲಿ ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಸಿ, ಕಣ್ಣನ್ —ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಸುಮಾರು ೩ ಸಾರಿ ಕ್ರಮ ತೆಗೆದು ಕೊಳ್ಳುತ್ತೇನೆಂದು ಹೇಳಿದರು. ಆದರೆ ಇದುವರೆವಿಗೂ ಕ್ರಮ ತೆಗೆದುಕೊಂಡಿಲ್ಲ. ಕಡೆಯದಾಗಿ ಈ ಸಾರಿಯಾದರೂ ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಈ ವಿಷಯ ಬಿ.ಡಿ.ಎ. ಕಮಿಟಿ ಮುಂದೆ ಇದೆ. ಇನ್ನು ಒಂದು ತಿಂಗಳಲ್ಲಿ ಇದು ತೀರ್ಮಾನ ಆಗಬಹುದು.

ಅಲ್ಪಕಾಲಾವಧಿ ಪ್ರಶ್ನೆ

ಜನತಾ ವಸತಿಗಳ ಯೋಜನೆಯ ಬಗ್ಗೆ

೨. **ಶ್ರೀ ಕೆ ಎಚ್. ಶ್ರೀನಿವಾಸ್** (ಶಿವಮೊಗ್ಗ).—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಎ) ೧೯೮೫-೮೬, ೮೬-೮೭ ಹಾಗೂ ೧೯೮೭-೮೮ನೇ ಸಾಲಿನಲ್ಲಿ ಹುಡ್ಕೋ ನೆರವಿನ ಜನತಾ ವಸತಿ ಯೋಜನೆಯಲ್ಲಿ ಮತ್ತು ಕಡಿಮೆ ವೆಚ್ಚದ ವಸತಿ ಯೋಜನೆಗಳಲ್ಲಿ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ.

ಬಿ) ಸದರಿ ಯೋಜನೆಗೆ ಮಂಜೂರಾದ ಮತ್ತು ಖರ್ಚಾದ ಹಣ.

ಸಿ) ಮೇಲ್ಕಂಡ ಯೋಜನೆಯಲ್ಲಿ ಆಯಾ ವರ್ಷಗಳಲ್ಲಿ ಕಟ್ಟಲ್ಪಟ್ಟ ಮನೆಗಳು

ಶ್ರೀ ಪಿ.ಜಿ. ಆರ್. ಸಿಂಧ್ಯ (ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು).—

(ಸೆಪ್ಟೆಂಬರ್ ೮೫ರ ಅಂತ್ಯದವರೆಗೆ)

ಎ)

ಹುಡ್ಕೋ ನೆರವಿನ ಜನತಾ ವಸತಿ ಯೋಜನೆ		ಕಡಿಮೆ ವೆಚ್ಚದ ಜನತಾ ಮನೆಗಳು
ವರ್ಷ	ಮಂಜೂರಾದ ಮನೆಗಳ ಸಂಖ್ಯೆ	ಮಂಜೂರಾದ ಮನೆಗಳ ಸಂಖ್ಯೆ
೧೯೮೩–೮೪	೪೫೦೮೦	೧೩೮೦೦
೧೯೮೪–೮೫	೫೫೨೨೫	೨೦೦೦೦
೧೯೮೫–೮೬	೫೫೨೨೫	೨೬೨೮೫

ಬಿ)

ವರ್ಷ	ಮಂಜೂರಾದ ಹಣ (ಲಕ್ಷಗಳಲ್ಲಿ)	ಖರ್ಚಾದ ಹಣ	ಮಂಜೂರಾದ ಹಣ (ಲಕ್ಷಗಳಲ್ಲಿ)	ಖರ್ಚಾದ ಹಣ
೧೯೮೩–೮೪	೧೪೪೦–೦೧	೧೧೨೬–೯೩	೨೫೯–೩೨	೨೪೦–೪೧
೧೯೮೪–೮೫	೧೯೨೭–೦೫	೯೩೨–೫೦	೩೮೫–೨೦	೩೦೫–೭೫
೧೯೮೫–೮೬	೧೨೦೪–೫೦	೫೫೨–೨೫೦	೫೨೫–೭೦	೨೬೨–೮೫೦

ಸಿ)

ವರ್ಷ	ಪೂರ್ಣಗೊಂಡ ಮನೆಗಳ ಸಂಖ್ಯೆ	ಪೂರ್ಣಗೊಂಡ ಮನೆಗಳ ಸಂಖ್ಯೆ
೧೯೮೩–೮೪	೩೮೪೪೭	೧೨೨೬೩
೧೯೮೪–೮೫	೨೮೭೮೧	೧೩೦೮೨
೧೯೮೫–೮೬	೩೫೨	೨೪೭

ಶ್ರೀ ಕೆ.ಹೆಚ್. ಶ್ರೀನಿವಾಸ.— ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಜನತಾ ವಸತಿ ಯೋಜನೆಯ ಬಗ್ಗೆ ಕೊಟ್ಟಿರತಕ್ಕಂಥ ಅಂಕಅಂಶಗಳನ್ನು ನೋಡಿದರೆ ೧೯೮೩–೮೪ನೇ ಸಾಲಿನಲ್ಲಿ ಮಂಜೂರಾದ ಮನೆಗಳ ಸಂಖ್ಯೆ ೪೫ ಸಾವಿರ, ಆದರೆ ಇವುಗಳಲ್ಲಿ ಪೂರ್ಣಗೊಂಡ ಮನೆಗಳ ಸಂಖ್ಯೆ ೩೮ ಸಾವಿರ ಮನೆಗಳು, ಇದರಲ್ಲಿ ೭ ಸಾವಿರ ಮನೆಗಳು ಉಳಿದುಕೊಂಡವು. ಆದೇ ರೀತಿಯಲ್ಲಿ ೧೯೮೪–೮೫ನೇ ಸಾಲಿನಲ್ಲಿ ಮಂಜೂರಾದ ಮನೆಗಳ ಸಂಖ್ಯೆ ೫೫ ಸಾವಿರ ಇದರಲ್ಲಿ ಪೂರ್ಣಗೊಂಡ ಮನೆಗಳ ಸಂಖ್ಯೆ ೨೮ ಸಾವಿರ ಮನೆಗಳು ಎರಡೂ ವರ್ಷಗಳಲ್ಲಿ ಸುಮಾರು ೨೧ ಸಾವಿರ ಮನೆಗಳು ಬಾಕಿ ಉಳಿದುಕೊಂಡಿವೆ. ನುತ್ತೆ ನಾವು ಈ ವರ್ಷದ ಅಂಕಅಂಶಗಳನ್ನು ತೆಗೆದುಕೊಂಡರೆ ಈಗಾಗಲೇ ಫೆಬ್ರುವರಿ ತಿಂಗಳಲ್ಲಿ ಇದ್ದೇವೆ. ೧೯೮೫–೮೬ನೇ ಸಾಲಿನಲ್ಲಿ ಮಂಜೂರಾದ ಮನೆಗಳ ಸಂಖ್ಯೆ ೫೫ ಸಾವಿರ ಈ ವರ್ಷ ಇದುವರೆವಿಗೂ ಕೇವಲ ೩೫೨ ಮನೆಗಳನ್ನು ಮಾತ್ರ ಪೂರ್ಣಗೊಳಿಸಿದ್ದೀರಿ. ಇದನ್ನು ನೋಡಿದರೆ ತಾವು ಈ ಯೋಜನೆಗೆ ಸರಿಯಾಗಿ ಹಣವನ್ನು ಒದಗಿಸಿಕೊಡುತ್ತಿಲ್ಲ. ಈ ಯೋಜನೆಯ ಅಭಿವೃದ್ಧಿಗೆ ಪ್ರಾಮಾಣಿಕವಾದ ಪ್ರಯತ್ನವನ್ನು ತಾವು ಮಾಡುತ್ತಿಲ್ಲ. ಈ ಯೋಜ

ನೆಯ ಅಭಿವೃದ್ಧಿ ವಿಷಯದಲ್ಲಿ ತಾವು ತಾತ್ಸಾರ ಮನೋಭಾವನೆಯನ್ನು ಇಟ್ಟುಕೊಂಡಿದ್ದೀರಿ ಎಂದು ನಮಗೆ ಸ್ಪಷ್ಟವಾಗಿ ತೋರಿಸುತ್ತದೆ. ಈ ಯೋಜನೆಯಲ್ಲದೆ ಬೇರೆ ಯೋಜನೆಗಳನ್ನು ತಾವು ಇದೂ ರೀತಿಯಲ್ಲಿ ಮಾಡಿದ್ದೀರಿ ? ಹಿಂದೆ ಈ ಯೋಜನೆಯಲ್ಲಿ ಒಂದು ಲಕ್ಷ ಮನೆಗಳನ್ನು ಒಂದು ವರ್ಷದಲ್ಲಿ ನಿರ್ಮಾಣ ಮಾಡಬೇಕೆನ್ನುವ ವೇಗವನ್ನು ಹಾಕಿಕೊಂಡಿದ್ದರು. ಆದರೆ ಕಳೆದ ಒಂದೆರಡು ವರ್ಷಗಳಿಂದ ಈ ಯೋಜನೆಯ ವೇಗ ಬಹಳ ಕಡಿಮೆಯಾಗಿದೆ. ಆದ್ದರಿಂದ ಜರೂರಾಗಿ ಮನೆಗಳನ್ನು ನಿರ್ಮಾಣ ಮಾಡುವ ಯೋಚನೆ ಏನಾದರೂ ಇದೆಯೇ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ.— ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳತಕ್ಕಂಥ ಮಾತಿನಲ್ಲಿ ಸತ್ಯ ಇದೆ. ಕಳೆದ ಒಂದೆರಡು ವರ್ಷಗಳಿಂದ ಜನತಾ ಮನೆಗಳ ಕೆಲಸ ಸ್ಥಗಿತ ಗೊಂಡಿದೆ. ಅದನ್ನು ನಾನು ಸಹ ಒಪ್ಪಿಕೊಳ್ಳುತ್ತೇನೆ. ಅದಕ್ಕೆ ನನ್ನದು ಸಹ ಸ್ವಲ್ಪ ಜವಾಬ್ದಾರಿ ಇದೆ. ಈ ಯೋಜನೆಯನ್ನು ಅಭಿವೃದ್ಧಿ ಮಾಡುವಾಗ ನಾವು ತಾತ್ಸಾರ ಮನೋಭಾವನೆ ಇಲ್ಲ. ಇದು ಬಡವರ ಕೆಲಸ, ಆದ್ದರಿಂದ ಆದಷ್ಟು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇನೆಂದರೆ ಹುಡ್ಕೋ ನೆರವಿನಿಂದ ಬರತಕ್ಕಂಥ ಹಣ ಸಕಾಲಕ್ಕೆ ಸರಿಯಾಗಿ ಬರದೆ ಬಹಳ ತೊಂದರೆಯಾಯಿತು. ೧೯೮೪—೮೫ನೇ ಸಾಲಿನಲ್ಲಿ ಬರಬೇಕಾದಂಥ ೮ ಕೋಟಿ ರೂಪಾಯಿಗಳ ಹಣ ನಮಗೆ ಕಳೆದ ಒಂದು ವಾರದ ಹಿಂದೆ ಬಂತು. ಅದಕ್ಕೆ ನಾನಾ ಕಾರಣಗಳು ಇವೆ.

೧೨—ಮಧ್ಯಾಹ್ನ

ಅವುಗಳನ್ನು ನಾನು ಈ ಸದನದಲ್ಲಿ ಹೇಳಬಯಸುವುದಿಲ್ಲ. ಆದರಿಂದ ಏನೂ ಉಪಯೋಗವಿಲ್ಲ. ಆದರೆ ಒಂದು ಮಾತನ್ನು ಹೇಳುತ್ತೇನೆ. ಇದು ಕೇವಲ ಈ ವರ್ಷದ್ದಲ್ಲ, ೧೯೮೨—೮೩ ರಿಂದಲೂ ಬಾಕಿ ಇರತಕ್ಕಥ ಮನೆಗಳನ್ನೂ ೧೯೮೪—೮೫ರಲ್ಲಿ ನಿರ್ಮಿಸಿದ್ದೇವೆ. ಇದನ್ನು ನಾವು ಮಾಡಲಿಲ್ಲ ನೀವು ಮಾಡಲಿಲ್ಲ ಎಂಬ ಮಾತನ್ನು ನಾನು ಹೇಳುವುದಕ್ಕೆ ಬಯಸುವುದಿಲ್ಲ. ೧೯೮೩ ರಿಂದ ೧೯೮೪—೮೫ರ ವರೆಗೆ ಬಾಕಿ ಇದ್ದಂಥ ಮನೆಗಳನ್ನು ಈ ವರ್ಷದ ಮೇ ತಿಂಗಳ ಒಳಗಾಗಿ ಮುಗಿಸಲಿಕ್ಕೆ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತೇನೆ, ಈಗಾಗಲೇ ನಾನು ಜಿಲ್ಲಾಧಿಕಾರಿಗಳು ಮತ್ತು ಬಿ.ಡಿ.ಓ.ಗಳನ್ನು ಬಹುತೇಕ ಜಿಲ್ಲೆಗಳಿಗೆ ಹೋಗಿ ಭೇಟಿ ಮಾಡಿ, ನಮ್ಮ ಅಧಿಕಾರಿಗಳ ಜೊತೆಯಲ್ಲೂ ಕುಳಿತು ರಿವ್ಯೂ ಮಾಡಿದ್ದೇನೆ, ಈ ಅಧಿವೇಶನದ ಸಂದರ್ಭದಲ್ಲೂ ಸಹ ನಾನು ಡಿವಿಜನ್‌ವಾರು ನಿಗಧಿ ಮಾಡಿರುತ್ತೇನೆ. ಆಯಾ ವಿಭಾಗದ ಜಿಲ್ಲಾಧಿಕಾರಿಗಳು, ವಿಭಾಗಾಧಿಕಾರಿಗಳ ಕಛೇರಿಯಲ್ಲಿ ಕರೆದು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಹೇಳಿ, ಈ ಕಾರ್ಯಕ್ರಮವನ್ನು ತ್ವರಿತವಾಗಿ ನಡೆಸಲಿಕ್ಕೆ ಎಲ್ಲವನ್ನೂ ಮಾಡುತ್ತಿದ್ದೇನೆ. ೧೯೮೫—೮೬ನೇ ಇಸವಿಯಲ್ಲಿ ಕೊಡತಕ್ಕಂಥ ಮನೆಗಳಿಗೆ ಹುಡ್ಕೋ ಸಹಾಯ ಇನ್ನೂ ಬಂದಿಲ್ಲ. ನಾನು ಇದಕ್ಕೋಸ್ಕರ ದೆಹಲಿಯಲ್ಲಿರುವ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿರುತ್ತೇನೆ. ಅವರು ಆಶ್ವಾಸನೆಯನ್ನು ಕೂಡ ಕೊಟ್ಟಿರುತ್ತಾರೆ ಒಂದೆರಡು ತಿಂಗಳಲ್ಲಿ ದುಡ್ಡನ್ನು ಕಳುಹಿಸಿ ಕೊಡುತ್ತೇವೆಂದು ಹೇಳಿದ್ದಾರೆ. ಈ ಕಾರ್ಯ ಸ್ವಲ್ಪ ಸ್ಥಗಿತವಾಗಿದೆ. ಇಲ್ಲ ಎಂದು ನಾನಂ ಹೇಳುವುದಿಲ್ಲ, ಆದರೆ ಈ ಕೆಲಸವನ್ನು ನಿಲ್ಲಿಸುವುದಿಲ್ಲ. ನಮ್ಮ ಯೋಜನೆಯ ಪ್ರಕಾರ ೧೯೮೫—೮೬ರಲ್ಲಿ ೫೫ ಸಾವಿರ, ೧೯೮೪—೮೫ರ ೫೦ ಸಾವಿರ ಈ ಎಲ್ಲಾ ಮನೆಗಳನ್ನು ಸಹ ಪೂರ್ಣ ಗೊಳಿಸುವ ಆಶ್ವಾಸನೆಯನ್ನು ತಮ್ಮ ಮೂಲಕ ಈ ಸದನದ ಎಲ್ಲಾ ಸದಸ್ಯರಿಗೆ ಕೊಡುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಸದರಿ ಪಟ್ಟಿಯನ್ನು ಮಂಡಿಸಲಾಯಿತು.

Total number of awards passed by the Labour Courts and Industrial Tribunals which are published in Karnataka Gazette